**ಸಾಕ್ಷಿಗೆ ದಿನಾಂಕಃ 28-02-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಕೆ ಪಿ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ಮೂಲತಃ ಚಿಕಿತ್ಸೆ ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರ ಅಭಿಪ್ರಾಯ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರರು ಆಸ್ಟ್ರ ಆಸ್ಪತ್ರೆಯಲ್ಲಿ ನ್ಯೂರೋ ಚಿಕಿತ್ಸೆ ಮತ್ತು ವೈದ್ಯರ ಅಭಿಪ್ರಾಯ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ನರ ಶಸ್ತ್ರಚಿಕಿತ್ಸೆಯಾಗಿರುವುದಿಲ್ಲ. ಅರ್ಜಿದಾರರಿಗೆ ಎದೆಗೆ ಸಂಬಂಧಿಸಿದಂತೆ ಶಸ್ತ್ರಚಿಕಿತ್ಸೆಯಾಗಿದೆ ಎಂದರೆ ಸರಿ. ಅರ್ಜಿದಾರರ ಡಿಸ್ಚಾರ್ಜ್ ಸಮ್ಮರಿಯಲ್ಲಿ ನರದೌರ್ಬಲ್ಯದ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿ.

2. ಅರ್ಜಿದಾರರಿಗೆ ಬೌದ್ಧಿಕ ಸಾಮಾರ್ಥ್ಯ ಪರೀಕ್ಷೆ ಮಾಡಿಲ್ಲ ಎಂದರೆ ಅರ್ಜಿದಾರರು ಸರಿಯಾಗಿ ಪ್ರತಿಕ್ರಿಯಿಸದೇ ಇರುವುದರಿಂದ ಬೌದ್ಧಿಕ ಸಾಮಾರ್ಥ್ಯ ಪರೀಕ್ಷೆ ಮಾಡಿರುವುದಿಲ್ಲ. ಅರ್ಜಿದಾರರಿಗೆ ಬೌದ್ಧಿಕ ಸಾಮಾರ್ಥ್ಯ ಪರೀಕ್ಷೆ ಮಾಡದೇ ಇರುವುದರಿಂದ ಅರ್ಜಿದಾರರು ಸರಿಯಾಗಿ ಪ್ರತಿಕ್ರಿಯಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಇತ್ತೀಚಿಗೆ ಸಿ ಟಿ ಬ್ರೈನ್ ಪರೀಕ್ಷೆ ಮಾಡಿದಾಗ ಅವರು ಸಾಮಾನ್ಯವಾಗಿದ್ದಾರೆ ಎಂದರೆ ಸರಿ.

3. ಅರ್ಜಿದಾರರು ವಿದ್ಯಾವಂತರು ಎಂದರೆ ಸರಿ. ಅರ್ಜಿದಾರರೇ ಈ ಪ್ರಕರಣದಲ್ಲಿ ಸಾಕ್ಷ್ಯ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಅರ್ಜಿದಾರರ ಹಿಂದಿನ ಜ್ಞಾಪನ ಶಕ್ತಿ ಸ್ವಲ್ಪ ಮಟ್ಟಿ ಕುಂಠಿತವಾಗಿರುತ್ತದೆ. ಅರ್ಜಿದಾರರು ಸ್ವತಃ ಪರಿಹಾರ ಅರ್ಜಿ ಸಲ್ಲಿಸಿ, ಸ್ವತಃ ಸಾಕ್ಷಿ ನುಡಿದಿರುವುದರಿಂದ ಅರ್ಜಿದಾರರಿಗೆ ಯಾವುನೇ ಹಿಂದಿನ ಜ್ಞಾಪನ ಶಕ್ತಿ ಕುಂದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತಲೆಗೆ ತೀವ್ರತೆರವಾದ ಗಾಯವಾಗದೇ ಇರುವುದರಿಂದ ಹಾಗೂ ಯಾವುದೇ ಶಸ್ತ್ರಚಿಕಿತ್ಸೆ ತಲೆಗೆ ಮಾಡದೇ ಇರುವುದರಿಂದ ಅವರಿಗೆ ನರ ಅಂಗನ್ಯೂನತೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ.

4. ಅರ್ಜಿದಾರರು ಡಿಸ್ಚಾರ್ಜ್ ಆಗುವ ಸಮಯದಲ್ಲಿ ಅವರಿಗೆ ಔಷಧಿ ಮಾತ್ರೆಗಳ ಬಗ್ಗೆ ಮಾತ್ರ ಸಲಹೆ ನೀಡಲಾಗಿತ್ತು ಎಂದರೆ ಸರಿ. ನಾನು ಅರ್ಜಿದಾರರನ್ನು ಪರೀಕ್ಷಿಸುವ ಸಮಯದಲ್ಲಿ ಜಿ ಸಿ ಎಸ್ ಅಂಕ 15/15 ಇತ್ತು ಎಂದರೆ ಸರಿ. ಅರ್ಜಿದಾರರ ಬುದ್ಧಿ ಪರೀಕ್ಷೆ ಮಾಡಿರುವ ವರ್ಕ್ ಶೀಟ್ ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಬುದ್ಧಿ ಪರೀಕ್ಷೆ ಮಾಡಿದಾಗ ಅವರು ಸಾಮಾನ್ಯರಂತೆ ಕಂಡು ಬಂದಿದ್ದರಿಂದ ಉದ್ದೇಶಪೂರ್ವಕವಾಗಿ ಬುದ್ಧಿ ಪರೀಕ್ಷೆ ಮಾಡಿರುವ ವರ್ಕ್ ಶೀಟ್ ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯ ತಲೆಗೆ ಪೆಟ್ಟಾದಾಗ ಆತನ ಜೀವಕ್ಕೆ ತೊಂದರೆಯಿದ್ದರೆ ಅದಕ್ಕೆ ಮೊದಲು ಚಿಕಿತ್ಸೆ ನೀಡಲಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ರೋಗಿಗಳಿಗೆ ಇದ್ದ ನ್ಯೂನತೆಗಳನ್ನು ಮುಂದುವರೆದ ಚಿಕಿತ್ಸಾ ದಾಖಲೆಗಳಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ಸಂಬಂಧಿಸಿದ ಮುಂದುವರೆದ ಚಿಕಿತ್ಸಾ ದಾಖಲೆಗಳನ್ನು ನೋಡಿರುವುದಿಲ್ಲ. ದಿಃ16.05.2024 ರಂದು ಅರ್ಜಿದಾರರು ಕೊನೆಯದಾಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ದಾಖಲೆಗಳ ಪ್ರಕಾರ ಸರಿ. ಅರ್ಜಿದಾರರು ಸಾಮಾನ್ಯವಾಗಿದ್ದರೂ ಸಹ ಅವರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ಅಂಗನ್ಯೂನತೆಯನ್ನು ನಿರ್ಧರಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರುಹಾಜರಿರುವುದರಿಂದ. ಅವರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**
**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)**
**(ಓ.ಹೇ.ಕೇ.ಸ.ಇ)**

**3 ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**